ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ: ಕೆಎಸ್‌ಎ/ಸಿಆರ್-60/2010-11

ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ)
ರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ,
ಬೆಂಗಳೂರು, ದಿನಾಂಕ: 30-09-2010.

# ಅಧಿಸೂಚನೆ – 1

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯಿದೆ, 2003 ರ ಪ್ರಕರಣ 35 (1) ರಡಿ ಪ್ರದತ್ತವಾದ ಅಧಿಕಾರದನ್ವಯ ಸದರಿ ಕಾಯಿದೆಯಡಿ ನೋಂದಾಯಿತರಾಗಿ ಪ್ರಕರಣ 15 ರ ಉಪಪ್ರಕರಣ (1) ರ ಖಂಡ (ಬಿ) ಅಥವಾ ಖಂಡ (ಡಿ) ರನ್ವಯ ರಾಜಿ ತೆರಿಗೆ ಪದ್ಧತಿಯಡಿ ತೆರಿಗೆ ಪಾವತಿಸುವ ಪ್ರತಿ ವರ್ತಕರು 2010 ರ ಸೆಪ್ಟೆಂಬರ್ 30 ಕ್ಕೆ ಕೊನೆಗೊಳ್ಳುವ ತಿಂಗಳಿಗೆ ಮತ್ತು ನಂತರದ ತಿಂಗಳುಗಳಿಗೆ ಪ್ರತಿ ತಿಂಗಳ ವಹಿವಾಟು ವಿವರವನ್ನು ಅದರ ಮುಂದಿನ ತಿಂಗಳ 15 ನೇ ತಾರೀಖು ಅಥವಾ ಅದಕ್ಕಿಂತ ಮೊದಲು ನಮೂನೆ ವ್ಯಾಟ್ 120 ರಲ್ಲಿ ಈ ಕೆಳಕಂಡಂತೆ ವಿದ್ಯುನ್ಮಾನ ಪದ್ಧತಿಯಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸಬಹುದೆಂದು ತಕ್ಷಣದಿಂದ ಜಾರಿಗೆ ಬರುವಂತೆ ಅಧಿಸೂಚಿಸಲಾಗಿದೆ:-

(1) ಇಂತಹ ಎಲ್ಲ ವರ್ತಕರು ಇದುವರೆಗೂ 'user name and password' ಗಳನ್ನು ಪಡೆಯದೇ ಇದ್ದಲ್ಲಿ ಸಂಬಂಧಿತ ಕ್ಷೇತ್ರವ್ಯಾಪ್ತಿಯ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯವರಿಂದ ತಕ್ಷಣವೇ ಪಡೆಯುವುದು.

(2) ಇಂತಹ ವರ್ತಕರು ಸದರಿ 'user name and password'ನ್ನು ಬಳಸಿ ಇಲಾಖೆಯ ವೆಬ್‌ಸೈಟ್ ಆದ http://vat.kar.nic.in ಗೆ ಪ್ರವೇಶಿಸಿ, ಅದರಲ್ಲಿ ನೀಡಿರುವ ಸೂಚನೆಗಳನ್ನು ಮತ್ತು ವಿಧಿವಿಧಾನಗಳನ್ನು ಅನುಸರಿಸಿ ನಮೂನೆ ವ್ಯಾಟ್ 120 ನ್ನು ವಿದ್ಯುನ್ಮಾನ ವಿಧಾನದ ಮೂಲಕ ಸಲ್ಲಿಸುವುದು.

(3) ಸಂಬಂಧಿತ ರಿಟರ್ನ್ ಜತೆಗೆ ಸಲ್ಲಿಸಬೇಕಾದ ಯಾವುದೇ ಶಾಸನಬದ್ಧ ನಮೂನೆಗಳ ವಿವರಗಳನ್ನು ಮೇಲೆ ಕಾಣಿಸಿದ ವೆಬ್‌ಸೈಟ್‌ನಲ್ಲಿನ ಸೂಚನೆಗಳನ್ನು ಅನುಸರಿಸಿ ಸಲ್ಲಿಸುವುದು ಮತ್ತು ಆನಂತರ ಅಂತಹ ಶಾಸನಬದ್ಧ ನಮೂನೆಗಳನ್ನು ಭೌತಿಕವಾಗಿ ಸಂಬಂಧಿತ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯವರ ಕಛೇರಿಯಲ್ಲಿ ನೀಡುವುದು.

(4) ಈ ರೀತಿ ವಿದ್ಯುನ್ಮಾನ ಪದ್ಧತಿಯಂತೆ ರಿಟರ್ನ್ ಸಲ್ಲಿಸಿದ ವರ್ತಕರು ಪ್ರತಿ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಸಲ್ಲಿಸಿದ ಮಾಸಿಕ 'ಇ-ನಮೂನೆ'ಗಳ ಕ್ರೋಢೀಕೃತ ವರದಿಯನ್ನು ಮೇಲೆ ಕಾಣಿಸಿದ ವೆಬ್‌ಸೈಟ್‌ನಿಂದ ಪಡೆದು ಅಧಿಕೃತ ಸಹಿಯೊಂದಿಗೆ ಆಯಾಯ ಅರ್ಧವರ್ಷ ಮುಗಿದ 30 ದಿನದೊಳಗೆ ಸಂಬಂಧಿತ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯವರ ಕಛೇರಿಗೆ ಸಲ್ಲಿಸುವುದು.

(ಪ್ರದೀಪ್ ಸಿಂಗ್ ಖರೋಲ)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ: ಕೆಎಸ್ಎ/ಸಿಆರ್–60/2010–11

ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ)
ರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ,
ಬೆಂಗಳೂರು, ದಿನಾಂಕ: 30–09–2010.

# ಅಧಿಸೂಚನೆ – 2

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯಿದೆ, 2003 ರ ಪ್ರಕರಣ 35 (1) ರಡಿ ಪ್ರದತ್ತವಾದ ಅಧಿಕಾರದನ್ವಯ ಸದರಿ ಕಾಯಿದೆಯಡಿ ನೋಂದಾಯಿತರಾಗಿ ಪ್ರಕರಣ 4 ರ ಉಪಪ್ರಕರಣಗಳಾದ (4) ಮತ್ತು (5) ರಡಿಯಲ್ಲಿ ತೆರಿಗೆ ಪಾವತಿಸುವ ಮತ್ತು ಅದೇ ಪ್ರಕರಣದ ಉಪಪ್ರಕರಣ (1) ರಡಿ ತೆರಿಗೆ ಬಾಧ್ಯತೆಗೆ ಒಳಪಡುವ ಎಲ್ಲ ವರ್ತಕರೂ, ಅವರವರಿಗೆ ಅನ್ವಯವಾಗುವಂತೆ 2010 ರ ಸೆಪ್ಟೆಂಬರ್ 30 ಕ್ಕೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ ಮತ್ತು ನಂತರದ ತ್ರೈಮಾಸಿಕಗಳಿಗೆ ಆಯಾಯ ತ್ರೈಮಾಸಿಕ ಮುಗಿದ 15 ದಿನಗಳ ಒಳಗಾಗಿ ಅಥವಾ 2010 ರ ಸೆಪ್ಟೆಂಬರ್ ತಿಂಗಳಿಗೆ ಮತ್ತು ನಂತರದ ತಿಂಗಳುಗಳಿಗೆ ಆಯಾಯ ತಿಂಗಳು ಮುಗಿದ 20 ದಿನಗಳ ಒಳಗಾಗಿ, ವಹಿವಾಟು ವಿವರವನ್ನು ನಮೂನೆ ವ್ಯಾಟ್ 105 ರಲ್ಲಿ ಈ ಕೆಳಕಂಡಂತೆ ವಿದ್ಯುನ್ಮಾನ ಪದ್ಧತಿಯಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸಬಹುದೆಂದು ತಕ್ಷಣದಿಂದ ಜಾರಿಗೆ ಬರುವಂತೆ ಅಧಿಸೂಚಿಸಲಾಗಿದೆ:–

(1) ಇಂತಹ ಎಲ್ಲ ವರ್ತಕರು ಇದುವರೆಗೂ 'user name and password' ಗಳನ್ನು ಪಡೆಯದೇ ಇದ್ದಲ್ಲಿ ಸಂಬಂಧಿತ ಕ್ಷೇತ್ರವ್ಯಾಪ್ತಿಯ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯವರಿಂದ ತಕ್ಷಣವೇ ಪಡೆಯುವುದು.

(2) ಇಂತಹ ವರ್ತಕರು ಸದರಿ 'user name and password'ನ್ನು ಬಳಸಿ ಇಲಾಖೆಯ ವೆಬ್‌ಸೈಟ್ ಆದ http://vat.kar.nic.in ಗೆ ಪ್ರವೇಶಿಸಿ, ಅದರಲ್ಲಿ ನೀಡಿರುವ ಸೂಚನೆಗಳನ್ನು ಮತ್ತು ವಿಧಿವಿಧಾನಗಳನ್ನು ಅನುಸರಿಸಿ ನಮೂನೆ ವ್ಯಾಟ್ 105 ನ್ನು ವಿದ್ಯುನ್ಮಾನ ವಿಧಾನದ ಮೂಲಕ ಸಲ್ಲಿಸುವುದು.

(3) ಸಂಬಂಧಿತ ರಿಟರ್ನ್ ಜತೆಗೆ ಸಲ್ಲಿಸಬೇಕಾದ ಯಾವುದೇ ಶಾಸನಬದ್ಧ ನಮೂನೆಗಳ ವಿವರಗಳನ್ನು ಮೇಲೆ ಕಾಣಿಸಿದ ವೆಬ್‌ಸೈಟ್‌ನಲ್ಲಿನ ಸೂಚನೆಗಳನ್ನು ಅನುಸರಿಸಿ ಸಲ್ಲಿಸುವುದು ಮತ್ತು ಆನಂತರ ಅಂತಹ ಶಾಸನಬದ್ಧ ನಮೂನೆಗಳನ್ನು ಭೌತಿಕವಾಗಿ ಸಂಬಂಧಿತ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಯವರ ಕಛೇರಿಯಲ್ಲಿ ನೀಡುವುದು.

(4) ಈ ರೀತಿ ವಿದ್ಯುನ್ಮಾನ ಪದ್ಧತಿಯಂತೆ ರಿಟರ್ನ್ ಸಲ್ಲಿಸಿದ ವರ್ತಕರು ಪ್ರತಿ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಸಲ್ಲಿಸಿದ ತ್ರೈಮಾಸಿಕ/ಮಾಸಿಕ 'ಇ–ನಮೂನೆ'ಗಳ ಕ್ರೋಢೀಕೃತ ವರದಿಯನ್ನು ಮೇಲೆ ಕಾಣಿಸಿದ ವೆಬ್‌ಸೈಟ್‌ನಿಂದ ಪಡೆದು ಅಧಿಕೃತ ಸಹಿಯೊಂದಿಗೆ ಆಯಾಯ ಅರ್ಧವರ್ಷ ಮುಗಿದ 30 ದಿನದೊಳಗೆ ಸಂಬಂಧಿತ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯವರ ಕಛೇರಿಗೆ ಸಲ್ಲಿಸುವುದು.

(ಪ್ರದೀಪ್ ಸಿಂಗ್ ಖರೋಲ)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ: ಕೆಎಸ್ಎ/ಸಿಆರ್-60/2010-11

ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ)
ರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ,
ಬೆಂಗಳೂರು, ದಿನಾಂಕ: 30-09-2010.

# ಅಧಿಸೂಚನೆ – 3

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯಿದೆ, 2003 ರ ಪ್ರಕರಣ 35 (1) ರಡಿ ಪ್ರದತ್ತವಾದ ಅಧಿಕಾರದನ್ವಯ ಸದರಿ ಕಾಯಿದೆಯಡಿ ನೋಂದಾಯಿತರಾಗಿ ವಾರ್ಷಿಕ 25 ಲಕ್ಷಕ್ಕಿಂತ ಕಡಿಮೆ ವಹಿವಾಟು ಇದ್ದು, ಪ್ರಕರಣ 4 ರಡಿಯಲ್ಲಿ ತೆರಿಗೆ ಪಾವತಿಸಲು ತ್ರೈಮಾಸಿಕಕ್ಕೊಮ್ಮೆ ವಹಿವಾಟು ಪತ್ರಿಕೆ ಸಲ್ಲಿಸುವ ವರ್ತಕರು 2010 ರ ಸೆಪ್ಟೆಂಬರ್ 30 ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ನಂತರದ ಪ್ರತಿ ತ್ರೈಮಾಸಿಕ ಅವಧಿಗೆ ವ್ಯಾಟ್ ನಮೂನೆ 100ನ್ನು ತ್ರೈಮಾಸಿಕ ಮುಗಿದ 15 ದಿನಗಳ ಒಳಗಾಗಿ ಈ ಕೆಳಕಂಡಂತೆ ವಿದ್ಯುನ್ಮಾನ ಪದ್ಧತಿಯಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸಬಹುದೆಂದು ತಕ್ಷಣದಿಂದ ಜಾರಿಗೆ ಬರುವಂತೆ ಅಧಿಸೂಚಿಸಲಾಗಿದೆ:-

(1) ಇಂತಹ ಎಲ್ಲ ವರ್ತಕರೂ ಇದುವರೆಗೂ 'user name and password' ಗಳನ್ನು ಪಡೆಯದೇ ಇದ್ದಲ್ಲಿ ಸಂಬಂಧಿತ ಕ್ಷೇತ್ರವ್ಯಾಪ್ತಿಯ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ರವರಿಂದ ತಕ್ಷಣವೇ ಪಡೆಯುವುದು.

(2). ಇಂತಹ ವರ್ತಕರು ಸದರಿ 'user name and password'ನ್ನು ಬಳಸಿ ಇಲಾಖೆಯ ವೆಬ್‌ಸೈಟ್ ಆದ http://vat.kar.nic.in ಗೆ ಪ್ರವೇಶಿಸಿ, ಅದರಲ್ಲಿ ನೀಡಿರುವ ಸೂಚನೆಗಳನ್ನು ಮತ್ತು ವಿಧಿವಿಧಾನಗಳನ್ನು ಅನುಸರಿಸಿ ನಮೂನೆ ವ್ಯಾಟ್ 100 ನ್ನು ವಿದ್ಯುನ್ಮಾನ ವಿಧಾನದ ಮೂಲಕ ಸಲ್ಲಿಸುವುದು.

(3) ಸಂಬಂಧಿತ ರಿಟರ್ನ್ ಜತೆಗೆ ಸಲ್ಲಿಸಬೇಕಾದ ಯಾವುದೇ ಶಾಸನಬದ್ಧ ನಮೂನೆಗಳ ವಿವರಗಳನ್ನು ಮೇಲೆ ಕಾಣಿಸಿದ ವೆಬ್‌ಸೈಟ್‌ನಲ್ಲಿನ ಸೂಚನೆಗಳನ್ನು ಅನುಸರಿಸಿ ಸಲ್ಲಿಸುವುದು ಮತ್ತು ಆನಂತರ ಅಂತಹ ಶಾಸನಬದ್ಧ ನಮೂನೆಗಳನ್ನು ಭೌತಿಕವಾಗಿ ಸಂಬಂಧಿತ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯವರ ಕಛೇರಿಯಲ್ಲಿ ನೀಡುವುದು.

(4) ಈ ರೀತಿ ವಿದ್ಯುನ್ಮಾನ ಪದ್ಧತಿಯಂತೆ ರಿಟರ್ನ್ ಸಲ್ಲಿಸಿದ ವರ್ತಕರು ಪ್ರತಿ ಆರ್ಥಿಕ ವರ್ಷದಲ್ಲಿ ಸಲ್ಲಿಸಿದ ಎಲ್ಲ ತ್ರೈಮಾಸಿಕ 'ಇ-ನಮೂನೆ'ಗಳ ಕ್ರೋಢೀಕೃತ ವರದಿಯನ್ನು ಮೇಲೆ ಕಾಣಿಸಿದ ವೆಬ್‌ಸೈಟ್‌ನಿಂದ ಪಡೆದು ಅಧಿಕೃತ ಸಹಿಯೊಂದಿಗೆ ಆಯಾಯ ಆರ್ಥಿಕ ವರ್ಷ ಮುಗಿದ 30 ದಿನದೊಳಗೆ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ/ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯವರ ಕಛೇರಿಗೆ ಸಲ್ಲಿಸುವುದು.

(ಪ್ರದೀಪ್ ಸಿಂಗ್ ಖರೋಲ)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.